Estd.: 1988 R.No. : MSCS/CR/1416/2023

# ಡಾ. ಪ್ರಭಾಕರ ಕೋರೆ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ನಿ., ಅಂಕಲಿ. (ಬಹುರಾಜ್ಯ)

ತಾ. ಚಿಕ್ಕೋಡಿ. ಜಿ. ಬೆಳಗಾವಿ.

## 38 ನೇ ವಾರ್ಷಿಕ ಸರ್ವಸಾಧಾರಣ ಸಭೆಯ

## ನೋಟೀಸು

ಮಾನ್ಯ ಸಹಕಾರಿ ಬಂಧುಗಳೇ,

ಸಹಕಾರ ಸಂಘವು ಸನ್ 2025-2026 ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು ಗುರುವಾರ ದಿನಾಂಕ : 24-09-2026 ರಂದು ಮಧ್ಯಾಹ್ನ 12-00 ಗಂಟೆಗೆ ಅಂಕಲಿ ಗ್ರಾಮದ ಶ್ರೀಮತಿ ಶಾರದಾದೇವಿ ಕೋರೆ ಹೈಸ್ಕೂಲ ಹತ್ತಿರ, "ಶಿವಾಲಯದ ಅನುಭವ ಮಂಟಪ" ದಲ್ಲಿ ಸೊಸಾಯಿಟಿಯ ಅಧ್ಯಕ್ಷರಾದ ಶ್ರೀಯುತ ಮಹಾಂತೇಶ ಲಿಂಗೌಡಾ ಪಾಟೀಲ ಇವರ ಘನಾಧ್ಯಕ್ಷತೆಯಲ್ಲಿ ಸೊಸಾಯಿಟಿ ಅಭಿವೃದ್ಧಿಗೋಸ್ಕರ ವಿಷಯಗಳನ್ನು ಚರ್ಚಿಸಲು ಪ್ರತಿ ವರ್ಷದಂತೆ ವಾರ್ಷಿಕ ಸಭೆಯನ್ನು ಕರೆಯಲಾಗಿದೆ ಕಾರಣ ಸದಸ್ಯರು ಸರಿಯಾದ ವೇಳೆಗೆ ಹಾಜರಿರುವಂತೆ ವಿನಂತಿಸಲಾಗಿದೆ. .

### ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು

1. ದಿನಾಂಕ 20/09/2025 ರಂದು ಜರುಗಿದ ವಾರ್ಷಿಕ ಸರ್ವಸಾಧಾರಣ ಸಭೆಯ ನಡುವಳಿಕೆಗಳನ್ನು ಓದುವುದು ಮತ್ತು ದೃಢಿಕರಿಸುವುದು.
2. ಸನ್ 2025-26 ನೇ ಸಾಲಿನ ನಿರ್ದೇಶಕ ಮಂಡಳಿಯು ತಯಾರಿಸಿದ ವಾರ್ಷಿಕ ವರದಿಯನ್ನು ಓದಿ ಖಚಿತಪಡಿಸುವುದು.
3. ಸನ್ 2025-26 ನೇ ಸಾಲಿನ ಪರಿಶೋಧನೆಯಾದ ಆರ್ಥಿಕ ತಖ್ತೆ:ಗಳಿಗೆ ಅಂಗೀಕಾರ ಕುರಿತು.
4. ಸನ್ 2025-26 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಪರಿಗಣನೆ ಕುರಿತು.
5. ಸನ್ 2025-26 ನೇ ಸಾಲಿನ ಲಾಭ ವಿಂಗಡಣೆಗೆ ಮಂಜೂರಾತಿ ನೀಡುವುದು.
6. ಸನ್ 2026-2027 ನೇ ಸಾಲಿಗಾಗಿ ದಿಗ್ದರ್ಶಕರ ಮಂಡಳಿಯವರು ತಯಾರಿಸಿದ ಅಂದಾಜು ಪತ್ರಿಕೆಗೆ ಮಂಜೂರಾತಿ ಕುರಿತು.
7. ಸಂಘದ ಕಾರ್ಯವ್ಯಾಪ್ತಿ ವಿಸ್ತರಣೆಗಾಗಿ ಉಪನಿಯಮಗಳ ತಿದ್ದುಪಡಿ (ಕರಡು ಪ್ರತಿ ಲಗತ್ತಿಸಲಾಗಿದೆ).
8. ಸಂಘದ ಕಾರ್ಯಕ್ಷೇತ್ರದಲ್ಲಿ ಹೊಸ ಶಾಖೆಗಳನ್ನು ತೆರೆಯಲು ಮಂಜೂರಾತಿ ಕುರಿತು.
9. 31/03/2026 ರ ಅಂತ್ಯದ ವೇಳೆಗೆ ಸಂಘದ ನಿರ್ದೇಶಕರ ಮಂಡಳಿಯ ಮತ್ತು ಅವರ ಸಂಬಂಧಿಕರಿಂದ ಬಾಕಿ ಇರುವ ಸಾಲದ ಮೊತ್ತದ ವರದಿಯನ್ನು ಸಲ್ಲಿಸುವುದು.
10. 31/03/2026 ರ ಅಂತ್ಯದ ವೇಳೆಗೆ ಸಂಘದ ವ್ಯವಸ್ಥಾಪಕ ನಿರ್ದೇಶಕರ/ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು ಅವರ ಸಂಬಂಧಿಕರಿಂದ ಬಾಕಿ ಇರುವ ಸಾಲದ ಮೊತ್ತದ ವರದಿಯನ್ನು ಸಲ್ಲಿಸುವುದು.
11. ಸನ್ 2026-27 ನೇ ಸಾಲಿಗಾಗಿ ಶಾಸನಬದ್ದ ಮತ್ತು ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸುವ ಕುರಿತು.
12. ಸಂಘದ ಶಾಖೆಗಳಿಗೆ ಸ್ವಂತ ಕಟ್ಟಡ ಮತ್ತು ನಿವೇಶನ ಖರೀದಿಸುವ ಕುರಿತು.
13. ಅಧ್ಯಕ್ಷರ ಪರವಾನಿಗೆಯಿಂದ ಬರಬಹುದಾದ ಯಾವುದೇ ಇತರ ವಿಷಯಗಳು.

ಸ್ಥಳ : ಅಂಕಲಿ
ದಿನಾಂಕ : 21-08-2026

ದಿಗ್ದರ್ಶಕ ಮಂಡಳಿಯ ಆದೇಶದ ಮೇರೆಗೆ
ಸಹಿ/-
ಡಿ. ಎಸ್. ಕರೋಶಿ
ವ್ಯವಸ್ಥಾಪಕ ನಿರ್ದೇಶಕರು

ಸೂಚನೆ :-

1) ಸಭೆಯಲ್ಲಿ ಚರ್ಚಿಸಲು ಸೂಚಿಸುವ ವಿಷಯಗಳನ್ನು ಸಭೆಯ ದಿನಾಂಕ 5 ದಿವಸ ಮುಂಚಿತವಾಗಿ ಸೊಸಾಯಿಟಿಯ ಆಡಳಿತ ಕಛೇರಿಗೆ ಲಿಖಿತರೂಪದಲ್ಲಿ ನೀಡಬೇಕು.
2) ಸಂಘದ ಸದಸ್ಯರಿಗೆ ವೇಬ್‌ಸೈಟ್ ಅಂತರ್ಜಾಲ ಸಂಪರ್ಕಿಸಬೇಕಾದ ವಿಳಾಸ www.dpkoresociety.com
3) ಸಭೆಗೆ ಬರುವಾಗ ಸಭೆಯ ನೋಟೀಸ ತರಬೇಕು ಹಾಗೂ ಸಭೆಯು ನಡೆಯುವ ಸ್ಥಳವನ್ನು ಪ್ರವೇಶಿಸುವ ಮುನ್ನ ಹಾಜರಿ ಪುಸ್ತಕದಲ್ಲಿ ರುಜು ಮಾಡತಕ್ಕದ್ದು.
4) ಸಂಘದ ವಾರ್ಷಿಕ ಸರ್ವಸಾಧರಣ ಸಭೆಗೆ ಹಾಜರಾತಿ ಸಮಯದಲ್ಲಿ ಸಂಘದ ಸಮಗ್ರ ಮಾಹಿತಿಯ ವಾರ್ಷಿಕ ವರದಿಯನ್ನು ತಮಗೆ ಕೊಡಲಾಗುವುದು ತಿಳಿಯಿರಿ.
5) ಸಂಘ-ಸಂಸ್ಥೆಗಳ ಸದಸ್ಯತ್ವ ಹೊಂದಿದ್ದಲ್ಲಿ ಸಂಘದ ಪ್ರತಿನಿಧಿಯಾಗಿ ನೇಮಕ ಮಾಡಿದ ಠರಾವು ನಕಲು, ಪ್ರತಿನಿಧಿಯ ಗುರುತಿನ ನಕಲು ಪ್ರತಿ ಮತ್ತು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ಆಡಳಿತ ಕಛೇರಿಗೆ ನೀಡತಕ್ಕದ್ದು.
6) ಸಂಘದ ಸದಸ್ಯರು ಸತತ 3 ಸಾಮಾನ್ಯ ಸಭೆಗೆ ಗೈರಾದರೆ ಮತದಾನ ಹಕ್ಕನ್ನು ಕಳೆದುಕೊಳ್ಳುತ್ತಾರೆ ಮತ್ತು ಸಂಘದಲ್ಲಿ ಕನಿಷ್ಠ ವ್ಯವಹಾರ ಹೊಂದುವುದು ಕಡ್ಡಾಯವಿರುತ್ತದೆ.



▲ ಪದ್ಮಶ್ರೀ ಡಾ. ಪ್ರಭಾಕರ ಕೋರೆಯವರ 79ನೇ ಹುಟ್ಟು ಹಬ್ಬ ಆಚರಣಾ ಸಮಾರಂಭದ ದಿವ್ಯ ಸಾನಿಧ್ಯವನ್ನು ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ॥ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಾಹಾಸ್ವಾಮಿಗಳು ವಹಿಸಿದ್ದರು,. ಸದರಿ ಕಾರ್ಯಕ್ರಮಕ್ಕೆ ಸನ್ಮಾನ್ಯ ಶ್ರೀ ಜಗದೀಶ ಶೆಟ್ಟರ ಮಾಜಿ ಮುಖ್ಯಮಂತ್ರಿಗಳು ಕರ್ನಾಟಕ ಸರಕಾರ ಹಾಗೂ ಸಂಸದರು ಬೆಳಗಾವಿ, ಸನ್ಮಾನ್ಯ ಶ್ರೀ ಪ್ರಕಾಶ ಹುಕ್ಕೇರಿ ವಿಧಾನ ಪರಿಷತ ಸದಸ್ಯರು, ಸನ್ಮಾನ್ಯ ಶ್ರೀ ದುರ್ಯೋಧನ ಐಹೊಳೆ ಶಾಸಕರು ರಾಯಬಾಗ, ಸನ್ಮಾನ್ಯ ಶ್ರೀ ಗಣೇಶ ಹುಕ್ಕೇರಿ ಶಾಸಕರು ಸದಲಗಾ–ಚಿಕ್ಕೋಡಿ ಸನ್ಮಾನ್ಯ ಸೌ ಶಶಿಕಲಾ ಜೊಲ್ಲೆ ಶಾಸಕರು ನಿಪ್ಪಾಣಿ, ಸನ್ಮಾನ್ಯ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅಧ್ಯಕ್ಷರು ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ಮತ್ತು ಇತರೆ ಗಣ್ಯಮಾನ್ಯರು ಉಪಸ್ಥಿತರಿದ್ದರು.



▲ ಸನ್ಮಾನ್ಯ ಪದ್ಮಶ್ರೀ ಡಾ ಪ್ರಭಾಕರ ಕೋರೆಯವರನ್ನು ಆಡಳಿತ ಕಛೇರಿಯ ದಿಗ್ದರ್ಶಕರಿಂದ ಸತ್ಕರಿಸಲಾಯಿತು.



▲ ಸನ್ಮಾನ್ಯ ಪದ್ಮಶ್ರೀ ಡಾ. ಪ್ರಭಾಕರ ಕೋರೆಯವರ 79 ನೇ ಹುಟ್ಟು ಹಬ್ಬದ ನಿಮಿತ್ಯ ಕಂಠೀರವ ಕೇಸರಿ ರತನ ಮಠಪತಿ ಕ್ರೀಡಾ ಮತ್ತು ಶಿಕ್ಷಣ ಸೊಸಾಯಿಟಿಗೆ ಪ್ರೊತ್ಸಾಹ ಧನ ರೂ 2,51,000/ ಚೇಕ್ ಮುಖಾಂತರ ನೀಡಲಾಯಿತು.



▲ ಸನ್ಮಾನ್ಯರ ಹುಟ್ಟು ಹಬ್ಬದ ನಿಮಿತ್ಯ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.



▲ ಸಂಸ್ಥೆಯ ಸಂಸ್ಥಾಪಕರ 79 ನೇ ಹುಟ್ಟು ಹಬ್ಬದ ನಿಮಿತ್ಯ ಹನುಮಾನನಗರ ಶಾಖೆಯ ಸಲಹಾ ಸಮಿತಿಯ ಸದಸ್ಯರಿಂದ ಅನಾಥಾಶ್ರಮದ ವಿಧ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ, ಬಾಗಲಕೋಟೆ ಶಾಖೆಯ ವತಿಯಿಂದ ಶ್ರೀ ಕಾಶಿವಿಶ್ವನಾಥ ದೇವಸ್ಥಾನ ವಿಧ್ಯಾಗೀರಿ ಬಾಗಲಕೋಟದಲ್ಲಿ ಒಂದು ದಿನದ ಅಲ್ಪೋಪಹಾರ ವಿತರಣೆ.



▲ ಹಾವೇರಿ ಶಾಖೆಯ ವತಿಯಿಂದ ಅಂಧ ಮಕ್ಕಳಿಗೆ, ದರೂರ ಶಾಖೆಯ ವತಿಯಿಂದ ಸರಕಾರಿ ಶಾಲೆಯ ವಿಧ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ ಹಾಗೂ ಹಿರೇಕೆರೂರ ಶಾಖೆಯ ವತಿಯಿಂದ ಕನ್ನಡ ಕರೋಕೆ ಗಾಯನ ಸ್ಪರ್ದೆಯನ್ನು ಆಯೋಜಿಸಲಾಗಿತ್ತು.




▲ ಸನ್ಮಾನ್ಯ ಪದ್ಮಶ್ರೀ ಡಾ. ಪ್ರಭಾಕರ ಕೋರೆಯವರ ಹುಟ್ಟುಹಬ್ಬ ನಿಮಿತ್ಯ ಖ್ಯಾತ ಹಿನ್ನಲೆ ಗಾಯಕ ರಾಜೇಶ ಕೃಷ್ಣನ ಮತ್ತು ನಿರೂಪಕಿ ಅನುಶ್ರೀ ಇವರಿಂದ ಸಂಗೀತ ಕಾರ್ಯಕ್ರಮ ಹಾಗೂ ರಾಷ್ಟ್ರಮಟ್ಟದ ಜಂಗೀ ನಿಕಾಲಿ ಕುಸ್ತಿ ಆಯೋಜಿಸಲಾಗಿತ್ತು, ಬೆಳಗಾವಿ ಜಿಲ್ಲೆಯ ಕುಸ್ತಿ ಸಮಿತಿಯ ವತಿಯಿಂದ ಸನ್ಮಾನ್ಯರನ್ನು ಬೆಳ್ಳಿಯ ಗಧೆ ನೀಡುವ ಮೂಲಕ ಸತ್ಕರಿಸಲಾಯಿತು.



▲ ಸಂಸ್ಥೆಯ 37 ನೇ ವಾರ್ಷಿಕ ಸರ್ವಸಾಧರಣ ಸಭೆಯನ್ನುದ್ದೇಶಿಸಿ ಹಾಗೂ ಎಲ್ಲ ಶಾಖೆಗಳ ಸಲಹಾ ಸಮಿತಿಯ ಸಭೆಯನ್ನುದ್ದೇಶಿಸಿ ಅಮಂತ್ರಿತ ದಿಗ್ದರ್ಶಕರಾದ ಶ್ರೀಯುತ ಅಮೀತ ಪ್ರ. ಕೋರೆಯವರು ಮಾತನಾಡುತ್ತಿರುವುದು.



▲ ಮಾಹಾರಾಷ್ಟ್ರದ ಗಡಹಿಂಗ್ಲಜ ಶಾಖೆಯನ್ನು ಪರಮ ಪೂಜ್ಯ ಮಾಹಾಂತ ಶಿದ್ದೇಶ್ವರ ಮಾಹಾಸ್ವಾಮಿಜಿ ಜಡಿಸಿದ್ದೇಶ್ವರ ಆಶ್ರಮ ಬೆಲಬಾಗ ಮಠ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು ಸಂಸ್ಥೆಯ ಸಂಸ್ಥಾಪಕರಾದ ಪದ್ಮಶ್ರೀ ಡಾ. ಪ್ರಭಾಕರ ಕೋರೆಯವರು ಉಪಸ್ಥಿತರಿದ್ದರು.



▲ ಸಂಸ್ಥೆಯ ಸನ್ 2024–25 ನೇ ಸಾಲಿನ ಪಟ್ಟಣ ಪ್ರದೇಶದ ಶಾಖೆಗಳಲ್ಲಿ ಧಾರವಾಡ ಶಾಖೆಗೆ ಪ್ರಥಮ ಸ್ಥಾನ ಮತ್ತು ಗ್ರಾಮೀಣ ಪ್ರದೇಶದ ಶಾಖೆಗಳಲ್ಲಿ ನಂದಿಕುರಳಿ ಶಾಖೆಗೆ ಪ್ರಥಮ ಸ್ಥಾನ ನೀಡಿ ಸತ್ಕರಿಸಲಾಯಿತು.



▲ ಸಂಸ್ಥೆಯ ಚಿಂಚಲಿ ಶಾಖೆಯ ಸದಸ್ಯರಾದ ದಿ. ಬಸಪ್ಪಾ ಮಾರುತಿ ಖಿಲಾರೆ ಇವರ ಸರಳ ವಾರಸುದಾರರಿಗೆ ಸದಸ್ಯರ ಅಫಘಾತ ವಿಮೆಯಡಿ ರೂ 1 ಲಕ್ಷ ಪರಿಹಾರ, ಕಂಕಣವಾಡಿ ಶಾಖೆಯ ಸಾಲಗಾರ ಸದಸ್ಯರಾದ ನಿಂಗಪ್ಪಾ ಬ ನಂದ್ಯಾಪಗೋಳ ಇವರಿಗೆ ರೂ 92000/- ಅಪಘಾತ ವಿಮೆ ಪರಿಹಾರ ಧನ ವಿತರಿಸಲಾಯಿತು.




▲ ಸಂಸ್ಥೆಯ ವಿವಿಧ ಶಾಖೆಗಳ ಸದಸ್ಯಬಾಂದವರಿಗೆ ಅತಿ ಕಡಿಮೆ ಬಡ್ಡಿದರದಲ್ಲಿ ವಾಹನ ಸಾಲ ವಿತರಿಸಲಾಯಿತು

## ಆರ್ಥಿಕ ಅಂಕಿ ಅಂಶಗಳು 31.03.2026 ಕ್ಕೆ ಇದ್ದಂತೆ

| | |
|---|---|
| ಸದಸ್ಯರು | 1,11,331 |
| ಸದಸ್ಯರ ಶೇರು ಬಂಡವಾಳ | 4,64,04,600.00 |
| ಕಾಯ್ದಿಟ್ಟ ಮತ್ತು ಇತರ ನಿಧಿಗಳು | 167,02,28,288.14 |
| ಠೇವುಗಳು | 1638,00,70,607.85 |
| ಸಾಲ ಮತ್ತು ಮುಂಗಡಗಳು | 1202,15,09,720.00 |
| ಗುಂತಾವಣೆಗಳು | 572,85,43,540.60 |
| ಬ್ಯಾಂಕಗಳ ಶಿಲ್ಕು | 146,55,29,288.07 |
| ದುಡಿಯುವ ಬಂಡವಾಳ | 1809,67,03,496.99 |
| ವಾರ್ಷಿಕ ವಹಿವಾಟು | 23248,92,02,571.83 |
| ನಿವ್ವಳ ಲಾಭ | 27,37,28,947.03 |
| ಶಾಖೆಗಳು | 61 |

ತೆರೆದ-ಅಂಚೆ

ಇವರಿಂದ :
**ಡಾ. ಪ್ರಭಾಕರ ಕೋರೆ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ನಿ., ಅಂಕಲಿ.(ಬಹುರಾಜ್ಯ)**
ತಾ. ಚಿಕ್ಕೋಡಿ. ಜಿ. ಬೆಳಗಾವಿ.
ಫೋನ : 08338-254251
www.dpkoresociety.com

ಗೆ,
ಶ್ರೀಮತಿ / ಶ್ರೀ ____________________

____________________

____________________